ಪಕ್ಷಿಯ ಚೂಪಾದ ಆಕಾರವುಳ್ಳ, ಝೇಂಕಾರ ಹಕ್ಕಿಯ ಚಿಕ್ಕ ಚಿಕ್ಕದಾದ ಇನ್ನೂ ಅನೇಕ ಮೊಟ್ಟೆಗಳನ್ನು ಅವುಗಳ ಆಕಾರಕ್ಕನುಗುಣವಾಗಿ ವಿಂಗಡಿಸಿದರು. ಗೂಡಿನ ವಿನ್ಯಾಸ, ಪಕ್ಷಿಗಳ ದೇಹದ ಆಕಾರ, ಅವುಗಳ ಆಹಾರ ಕ್ರಮ, ವಾಸಿಸುವ ಪರಿಸರ, ಮುಂತಾದ ಲಕ್ಷಣಗಳ ಮೇಲೆ ಮೊಟ್ಟೆಯ ಆಕಾರ ನಿರ್ಧರಿತವಾಗುತ್ತದೆ ಎಂಬ ಅಂಶಗಳನ್ನು ವಿಜ್ಞಾನಿಗಳು ಗಮನಿಸಿದರು.

ಮೊಟ್ಟೆಗಳು ಕೊಬ್ಬು ಮತ್ತು ಪ್ರೊಟೀನ್‌ನಿಂದ ಸಮೃದ್ಧವಾದ ಹಳದಿ ಲೋಳೆಯನ್ನೊಳಗೊಂಡಿವೆ. ಲೋಳೆಯ ಬಣ್ಣ, ಗುಣಮಟ್ಟ, ಸಂಯೋಜನೆಗಳು ಮೊಟ್ಟೆಯಿಡುವ ಜೀವಿಯ ಆಹಾರ ಕ್ರಮದ ಮೇಲೆ ಅವಲಂಬಿತವಾಗಿವೆ.

ಗೂಡಿನಿಂದ ಆಕಸ್ಮಿಕವಾಗಿ ಜಾರಿಹೋದ ಮೊಟ್ಟೆಗಳು ಉರುಳಿ ದೂರ ಹೋಗದೇ ವೃತ್ತಾಕಾರವಾಗಿ ತಮ್ಮದೇ ಅಕ್ಷದಲ್ಲಿ ಸುತ್ತಿ (ಭ್ರಮಣ) ಅಲ್ಲೇ ನಿಲ್ಲುವ ಗುಣವನ್ನು ಪಡೆದಿವೆ. ಒತ್ತಿದರೆ ಅಪ್ಪಚ್ಚಿಯಾಗಬಲ್ಲ ಮೊಟ್ಟೆ ಕೆಲವು ನಿರ್ದಿಷ್ಟ ಕೋನದಲ್ಲಿ ಅತ್ಯಂತ ಗಟ್ಟಿಯಾಗಿ ನಿಲ್ಲುತ್ತದೆ. ಮೊಟ್ಟೆಯ ಅಂಡಾಕಾರವನ್ನೇ ಹೋಲುವ ಕಮಾನುಗಳು ಏಕೆ ಅಷ್ಟು ಬಲಯುತವಾಗಿರುತ್ತವೆ ಎಂಬುದಕ್ಕೆ ಗಣಿತಸೂತ್ರ ಅನ್ವಯಿಸಲಾಗಿದೆ.

ಕಾಡುಹಕ್ಕಿಗಳ ಮೊಟ್ಟೆಗಳು ಬಿಳಿ, ಹಸಿರು, ಕಂದು, ಬೂದು, ಕೆಂಪು, ಕಿತ್ತಳೆ, ಮೊದಲಾದ ಬಣ್ಣಗಳಲ್ಲಿ ಕಂಡುಬರುತ್ತವೆ. ನಮಗೆ ಬಿಳಿ ಬಣ್ಣದಲ್ಲಿ ಗೋಚರಿಸಬಲ್ಲ ಹಲವು ಮೊಟ್ಟೆಗಳು ನೇರಳಾತೀತ ಬೆಳಕಿನಲ್ಲಿ ಬೇರೆಯದೇ ಬಣ್ಣದ್ದಾಗಿ ಕಾಣುತ್ತವೆ. ನಮ್ಮ ಕಣ್ಣುಗಳು ನೇರಳಾತೀತ ಬಣ್ಣಗಳನ್ನು ನೋಡಲಾರವು. ಆದರೆ ಪಕ್ಷಿಗಳು ನೇರಳಾತೀತ ಬಣ್ಣಗಳನ್ನು ಗುರುತಿಸಬಲ್ಲವು. ಸಾಮಾನ್ಯವಾಗಿ ಮರಗಳಲ್ಲಿ ಗೂಡು ಕಟ್ಟುವ ಪಕ್ಷಿಗಳ ಮೊಟ್ಟೆಗಳು ಸಾದಾ ಬಣ್ಣದವಾಗಿರುತ್ತವೆ. ಆದರೆ ಬಯಲು ಪ್ರದೇಶಗಳಲ್ಲಿ ಮೊಟ್ಟೆಯಿಡುವ ಜೀವಿಗಳ ಮೊಟ್ಟೆಗಳ ಮೇಲೆ ಶತ್ರುಗಳನ್ನು ಯಾಮಾರಿಸಲು ಚುಕ್ಕೆ, ಚಿತ್ತಾರಗಳು (ಕಪಟ, ಛದ್ಮವೇಷ) ಕಂಡುಬರುತ್ತವೆ. ಮೊಟ್ಟೆಗಳ ಕವಚಗಳು ಸಾಕಷ್ಟು ದಪ್ಪ ಮತ್ತು ಗಟ್ಟಿಯಾಗಿದ್ದು ಭ್ರೂಣದ ಬೆಳವಣಿಗೆಗೆ, ಪೋಷಿಸುವ ತಾಯಿಗೆ ಕಾವು ಕೊಡಲು, ಮೊಟ್ಟೆಯೊಡೆದು ಮರಿಗಳು ಹೊರಬರಲು ಸರಿಯಾಗುವಂತೆ ರಚಿತವಾಗಿರುತ್ತವೆ.

ಮೊಟ್ಟೆ ಕವಚಗಳ ದಪ್ಪವನ್ನು ಆಧರಿಸಿ ತಾಯಿ ಕೋಳಿಯ ವಯಸ್ಸನ್ನು ತಿಳಿಯಬಹುದು. ವಯಸ್ಕ ಕೋಳಿಗಿಂತ ಯುವ ಕೋಳಿಯು ಗಟ್ಟಿ ಕವಚದ ಮೊಟ್ಟೆಗಳನ್ನು ಇಡುತ್ತದೆ. ಕೋಳಿಗೆ ವಯಸ್ಸಾದಂತೆ ಅದರ ಮೊಟ್ಟೆಯ ಕವಚ ತೆಳು ಆಗುತ್ತದೆ. ಆದರೆ ಯುವ ಕೋಳಿಗಳಿಗಿಂತ ವಯಸ್ಕ ಕೋಳಿಗಳು ಹೆಚ್ಚು



### ಮೊಟ್ಟೆಯ ಪ್ರೇರಣೆ

ಮನುಕುಲದ ಹಲವಾರು ಆಧುನಿಕ ಅನ್ವೇಷಣೆಗಳಿಗೆ, ಸಾಧನಗಳ ನಿರ್ಮಾಣಕ್ಕೆ ಪ್ರಾಣಿ ಪಕ್ಷಿಗಳೇ ಸ್ಫೂರ್ತಿ. ಗಾಳಿ ಮತ್ತು ಮಳೆಯಿಂದ ರಕ್ಷಿಸಿಕೊಳ್ಳಲು ಪಕ್ಷಿಗಳ ಗೂಡು ಕಟ್ಟುವ, ನೇಯುವ, ಸುರಂಗ ಕೊರೆಯುವ, ನೀರು ನಾಯಿಗಳು ಮರ ಮತ್ತು ಮಣ್ಣಿನಿಂದ ಒಡ್ಡುಗಳನ್ನು ನಿರ್ಮಿಸುವ, ನೀರು ಕೀಟಗಳ ಚಿಮಣಿ ತರದ ಟವರ್‌ಗಳ ನಿರ್ಮಾಣದ ಹಿಂದಿರುವ ಕೌಶಲ್ಯಗಳ ರಹಸ್ಯಗಳನ್ನು ತಿಳಿಯುವಲ್ಲಿ ಸಂಶೋಧಕರು ಹೆಣಗಾಡುತ್ತಿದ್ದಾರೆ. ಇದೀಗ ಮೊಟ್ಟೆಗಳ ವಿವಿಧ ಆಕಾರಕ್ಕೆ ನಿರ್ದಿಷ್ಟ ಸೂತ್ರವನ್ನು ಕಂಡುಹಿಡಿದಿದ್ದಾರೆ. ಮೊಟ್ಟೆಯ ಗಾತ್ರದ ಸೂತ್ರವನ್ನು ಬಳಸಿ ಅದೇ ಆಕಾರದ ಮನೆಗಳನ್ನು ಕಟ್ಟಿದವರಿದ್ದಾರೆ. ಸಹಜ ಮೊಟ್ಟೆಗಳಲ್ಲಿ ಕವಚದ ತುಂಬೆಲ್ಲ ಕಣ್ಣಿಗೆ ಕಾಣದ ಸೂಕ್ಷ್ಮ ರಂಧ್ರಗಳಿದ್ದು, ಅವುಗಳ ಮೂಲಕ ಉಸಿರಾಟ ನಡೆಯುತ್ತಿರುತ್ತದೆ.

ಅನ್ಯಗ್ರಹಗಳಿಗೆ ಮನುಷ್ಯರ ಇಡೀ ಶರೀರವನ್ನು ಕಳಿಸುವ ಬದಲು ಮಿದುಳನ್ನು ಮಾತ್ರ ಕಳಿಸಿದರೆ ಹೇಗೆ ಎಂಬ ಚಿಂತನೆ ಹಿಂದೆ ನಡೆದಿತ್ತು ತಾನೆ? ಯಾರಿಗೆ ಗೊತ್ತು, ಮೊಟ್ಟೆಯಂಥ ಕ್ಯಾಪ್ಸೂಲಿನಲ್ಲಿ ಮನುಷ್ಯರ ಫಲಿತ ಮೊಟ್ಟೆಯನ್ನೇ ಇಟ್ಟು ಕಳಿಸುವ ಯೋಜನೆಗೂ ಕಾವು ಸಿಕ್ಕೀತು. ಕಾದು ನೋಡೋಣ.